# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No. 1 | Issue : 272 | Pages .02 | Date : 17.09.2025 WEDNESDAY | RNI NO.KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 272 – ಪುಟಗಳು : 02 17.09.2025 ಬುಧವಾರ | Ph : 8762954248 | ದರ : ₹1


# ಸಾಮಾಜಿಕ–ಶೈಕ್ಷಣಿಕ ಗಣತಿಗೆ ಜಿಲ್ಲಾಡಳಿತ ಸನ್ನದ್ಧ

## ಸೆ. 22 ರಿಂದ ಅ. 7ರ ವರೆಗೆ ಕಾರ್ಯ : ಸಿಬ್ಬಂದಿಗೆ ತರಬೇತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಸೆ. 22 ರಿಂದ ಅ. 7ರ ವರೆಗೆ ನಡೆಯಲಿದ್ದು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಸಮೀಕ್ಷೆಯಲ್ಲಿ ಭಾಗ ವಹಿಸುವ ಸಿಬ್ಬಂದಿಗೆ ತರಬೇತಿ, ಮನೆ ಮನೆಗೆ ಸ್ಟಿಕ್ಕರ್ ಅಂಟಿಸುವುದು, ಜಿಯೋ ಟ್ಯಾಗ್ ಅಳವಡಿಕೆ ಕಾರ್ಯ ಬಹುತೇಕ ಪೂರ್ಣಗೊಂಡಿದೆ.

ಜಿಲ್ಲೆಯ 5,47,312ಕ್ಕೂ ಹೆಚ್ಚು ಕುಟುಂಬಗಳ ಸಮೀಕ್ಷೆ ಸೆ.22 ರಂದು ಆರಂಭವಾಗಲಿದೆ.

**ಶೇ.90 ರಷ್ಟು ಪೂರ್ಣ:**

ಜಿಲ್ಲೆಯ ಸೆಸ್ಕ್ ವಿದ್ಯುತ್ ಮೀಟರ್ ರೀಡರ್‌ಗಳು ಆ. 23 ರಿಂದ ಮನೆ ಮನೆಗೆ ಸ್ಟಿಕ್ಕರ್ ಹಾಗೂ ಜಿಯೋ ಟ್ಯಾಗಿಂಗ್ ಪ್ರಕ್ರಿಯೆ ಇದೀಗ ಹಾಸನ ಜಿಲ್ಲೆಯಲ್ಲಿ ಕೊನೆ ಹಂತ ತಲುಪಿದ್ದು ಶೇ.10 ರಷ್ಟು ಮಾತ್ರ ಬಾಕಿ ಉಳಿದಿದೆ. ಒಂದೇ ಒಂದು ಕುಟುಂಬವು ಸಮೀಕ್ಷೆಯಿಂದ ಹೊರಗುಳಿಯಬಾರದೆಂಬ ಇರಾದೆಯೊಂದಿಗೆ ಪ್ರತಿ ಮನೆ ಬಾಗಿಲಿಗೂ ಸಹ ಸ್ಟಿಕ್ಕರ್ ಅಂಟಿಸಲಾಗುತ್ತಿದೆ.

### ಸಂಭಾವ್ಯ ಪ್ರಶ್ನೆಗಳು

ರಾಜ್ಯದ ಪ್ರತೀ ನಾಗರಿಕರ ಶೈಕ್ಷಣಿಕ ವಿದ್ಯಾರ್ಹತೆ, ಸಾಮಾಜಿಕ ಸ್ಥಿತಿಗತಿ, ಮೂಲ ಕಸುಬು, ಪ್ರಸಕ್ತ ನಿರ್ವಹಿಸುತ್ತಿರುವ ಕಸುಬು, ಸರ್ಕಾರಿ ಉದ್ಯೋಗದ ಬಗ್ಗೆ ನಿಖರ ಮಾಹಿತಿ ಕಲೆಹಾಕಲು ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ 40 ಪ್ರಶ್ನೆಗಳು ಹಾಗೂ ಕುಟುಂಬಕ್ಕೆ ಸಂಬಂಧಿಸಿದ 20 ಪ್ರಶ್ನೆಗಳು ಸೇರಿ ಒಟ್ಟು 60 ಪ್ರಶ್ನೆಗಳಿಗೆ ಸಮೀಕ್ಷೆಗೊಳಪಡುವ ಕುಟುಂಬಸ್ಥರು ಉತ್ತರಿಸಬೇಕಾಗುತ್ತದೆ. ಪಟ್ಟಿ ಮಾಡಲಾದ ಮನೆಗಳನ್ನು ಸಮೀಕ್ಷೆ ನಡೆಸಲು 4,800 ಸಮೀಕ್ಷಾದಾರರು ಕರ್ತವ್ಯ ನಿರ್ವಹಿಸಲಿದ್ದಾರೆ. ಇವರನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ 480 ಮೇಲ್ವಿಚಾರಕರನ್ನು ನೇಮಿಸಲಾಗಿದೆ. 150 ಮನೆಗಳ ಗುಂಪಿಗೆ ಒಂದು ಬ್ಲಾಕ್‌ನಂತೆ ಒಟ್ಟು 3,689 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ.

### ಆರ್‌ಆರ್ ಇಲ್ಲದವರ ಮಾಹಿತಿ

ಮುಖ್ಯವಾಗಿ ವಿದ್ಯುತ್ ಮೀಟರ್ ಇರುವಂತಹ ಕುಟುಂಬಗಳನ್ನು ಗುರುತಿಸಲಾಗಿದ್ದು ಆರ್‌ಆರ್ ಇಲ್ಲದವರ ಮಾಹಿತಿಯನ್ನು ಆಯಾ ತಾಲೂಕು ಇಒ ಗಳ ನೇತೃತ್ವದಲ್ಲಿ ಪಿಡಿಒ, ಬಿಲ್ ಕಲೆಕ್ಟರ್ ಮತ್ತಿತರ ಸಿಬ್ಬಂದಿಗಳ ಮೂಲಕ ಆರ್‌ಆರ್ ರಹಿತ ಕುಟುಂಬಗಳ ಮಾಹಿತಿಯನ್ನು ಕಲೆಹಾಕಲಿದ್ದಾರೆ. ಆರ್‌ಆರ್ ರಹಿತ ಕುಟುಂಬಗಳನ್ನು ಗ್ರಾಪಂ, ನಾಡ ಕಚೇರಿ ಬಳಿ ಸಮೀಕ್ಷೆಗೊಳಪಡಿಸಲು ಯೋಜಿಸಲಾಗಿದೆ.

### ಹಾಸನ ಜಿಲ್ಲೆಯಲ್ಲಿ ಸಮೀಕ್ಷೆಗೆ ಗುರುತಿಸಲಾದ ಕುಟುಂಬಗಳ ಮಾಹಿತಿ

| ತಾಲ್ಲೂಕು | ನಗರ | ಗ್ರಾಮೀಣ | ಒಟ್ಟು |
|---|---|---|---|
| ಸಕಲೇಶಪುರ | 8,365 | 30,361 | 38,726 |
| ಆಲೂರು | 4,385 | 20,248 | 24,633 |
| ಹಾಸನ | 79,565 | 73,569 | 1,53,134 |
| ಅರಕಲಗೂಡು | 6,294 | 49,920 | 56,214 |
| ಚನ್ನರಾಯಪಟ್ಟಣ | 18,859 | 69,775 | 88,634 |
| ಅರಸೀಕೆರೆ | 17,494 | 68,659 | 86,153 |
| ಹೊಳೆನರಸೀಪುರ | 12,192 | 40,610 | 52,802 |
| ಬೇಲೂರು | 7,400 | 39,616 | 47,016 |
| ಒಟ್ಟು | 1,54,554 | 3,92,758 | 5,47,312 |

### ಗಣತಿದಾರರಿಗೆ ತರಬೇತಿ

ಇದೇ ತಿಂಗಳಿನಿಂದ ಆರಂಭವಾಗುವ ಗಣತಿ ಕಾರ್ಯಕ್ಕೆ 50 ಗಣತಿದಾರರಿಗೊಬ್ಬರಂತೆ ಒರ್ವ ಮಾಸ್ಟರ್ ಟ್ರೈನರ್‌ಗಳನ್ನು ನೇಮಿಸಲಾಗಿದ್ದು ಜಿಲ್ಲೆಯಲ್ಲಿ 100 ಮಾಸ್ಟರ್ ಟ್ರೇನರ್‌ಗಳು ಇದ್ದಾರೆ. ಜಿಲ್ಲೆಯ ಆಯಾ ತಾಲ್ಲೂಕು ತಹಸೀಲ್ದಾರ್ ನೇತೃತ್ವದಲ್ಲಿ ಕ್ಲಸ್ಟರ್ ಮಟ್ಟದಲ್ಲಿ ನಿಯೋಜಿಸಲ್ಪಡುವ ಗಣತಿದಾರರಿಗೆ ತರಬೇತಿ ನೀಡಲು ಮೈಕ್ರೋ ಪ್ಲಾನಿಂಗ್ ಮಾಡಿಕೊಳ್ಳಲಾಗಿದ್ದು ಶಾಲಾ ಅವಧಿಯ ಬಳಿಕವಷ್ಟೆ ಗಣತಿದಾರ ಶಿಕ್ಷಕರಿಗೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ.

## ಹಾಸನಾಂಬ ಜಾತ್ರೆ: ಸಿಎಂ, ಡಿಸಿಎಂಗೆ ಆಹ್ವಾನ





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಅಧಿದೇವತೆ ಹಾಸನಾಂಬ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರಿಗೆ ಅಧಿಕೃತ ಆಹ್ವಾನ ನೀಡಲಾಯಿತು.

ಶಾಸಕ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಅವರ ನೇತೃತ್ವದಲ್ಲಿ ಬೆಂಗಳೂರಿಗೆ ತೆರಳಿದ್ದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ದೇವಾಲಯ ಆಡಳಿತಾಧಿಕಾರಿ ಮಾರುತಿ ಅವರು ಆಹ್ವಾನ ನೀಡಿದರು.

ಮೊದಲಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರಿಗೆ ಆಹ್ವಾನ ಪತ್ರಿಕೆ ನೀಡಿ ಸ್ವಾಗತಿಸಲಾಯಿತು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರನ್ನು ಭೇಟಿಯಾಗಿ ಹಾಸನಾಂಬ ಜಾತ್ರೆಗೆ ಆಗಮಿಸುವಂತೆ ಮನವಿ ಮಾಡಲಾಯಿತು.

ಅ. 9 ರಿಂದ 23ರ ವರೆಗೆ ಹಾಸನಾಂಬ ಜಾತ್ರಾ ಮಹೋತ್ಸವ ನೆರವೇರಲಿದ್ದು ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆಯಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

## ಚಿಕ್ಕಭಾಗನಹಳ್ಳಿ ಗಣಿಗಾರಿಕೆ ಸ್ಥಗಿತಕ್ಕೆ ಗ್ರಾಮಸ್ಥರ ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಚಿಕ್ಕಭಾಗನಹಳ್ಳಿ ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದ್ದು ಅದಕ್ಕೆ ಕಡಿವಾಣ ಹಾಕಬೇಕೆಂದು ಗ್ರಾಮಸ್ಥರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಗ್ರಾಮಸ್ಥ ಪ್ರವೀಣ್‌ಗೌಡ ಮಾತನಾಡಿ, ಚಿಕ್ಕಭಾಗನಹಳ್ಳಿ ಗ್ರಾಮದ ಅನೇಕ ರೈತರಿಗೆ ಸ.ನಂ. 45 ರಲ್ಲಿ ಜಮೀನು ಮಂಜೂರಾಗಿದ್ದು ಅವುಗಳ ಖಾತೆ ಪಹಣಿ ಮಾಡಿಕೊಂಡು ಅಂದಿನಿಂದಲೂ ಸ್ವತ್ತಿನ ಸ್ವಾಧೀನ ಹೊಂದಿ ನೆಮ್ಮದಿಯಾಗಿ ಜೀವನ ಸಾಗಿಸಿಕೊಂಡು ಬಂದಿದ್ದಾರೆ. ಯರೇಬೋರೆ ಕಾವಲು ಗ್ರಾಮಕ್ಕೆ ಸೇರಿದ ಸ.ನಂ. 92/2ರ 1–24 ಎಕರೆ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ಗಣಿಗಾರಿಕೆ ನಡೆಸುತ್ತಿದ್ದಾರೆ. ಈ ಜಾಗಕ್ಕೆ ಸಂಬಂಧಿಸಿದಂತೆ ಹಲವಾರು ಎಕರೆ ಕೆರೆಕಟ್ಟೆ ಜಮೀನು ಒತ್ತುವರಿ ಮಾಡಿಕೊಂಡು ಜಮೀನು ಉಳಮೆ ಮಾಡಿಕೊಂಡಿರುವ ಜನಸಾಮಾನ್ಯರಿಗೆ ವೃಥಾ ತೊಂದರೆ ಕೊಡುತ್ತಾ ಬಂದಿದ್ದಾರೆ.

ಗಣಿಗಾರಿಕೆ ನಿಲ್ಲಿಸುವಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವ ಪ್ರಯೋಜನವಾಗಿಲ್ಲ ಎಂದರು.

ಗ್ರಾಮದ ಮಂಜೇಗೌಡ ಮಾತನಾಡಿ, ಗಣಿಗಾರಿಕೆಯಿಂದ ಜನರಿಗೆ ಸಾಕಷ್ಟು ಸಮಸ್ಯೆಯಾಗಲಿದೆ. ಅಧಿಕಾರಿಗಳಿಗೆ ಇದು ಅರ್ಥವಾಗುತ್ತಿಲ್ಲ.

ಡೈನಾಮೆಟ್ ಸಿಡಿಸುವುದರಿಂದ ಶಬ್ದ ಮಾಲಿನ್ಯ ಉಂಟಾಗಿ ಜನ ಜಾನುವಾರುಗಳು ನೆಮ್ಮದಿಯಾಗಿ ವಾಸಿಸಲು ಅಸಾಧ್ಯವಾಗುತ್ತದೆ. ಈ ಸ್ಥಳ ಗ್ರಾಮಕ್ಕೆ ಕೇವಲ 700–800 ಮೀಟರ್ ದೂರವಿರುತ್ತದೆ. ಕಲ್ಲು ಗಣಿಗಾರಿಕೆಯಿಂದ ಬರುವ ಧೂಳು ವ್ಯವಸಾಯದ ಭೂಮಿಯ ಮೇಲೆ ಬೀಳುವುದರಿಂದ ಆ ಜಾಗ ವ್ಯವಸಾಯಕ್ಕೆ ಯೋಗ್ಯವಾಗದೆ ಭೂಮಿ ಬರಡಾಗುತ್ತದೆ ಅಲ್ಲೆ ಯಾವುದೇ ಕೃಷಿ ಮಾಡದಂತಾಗಿ ಆಹಾರಕ್ಕೆ ತೊಂದರೆ ಆಗಿ ಜೀವನ ಮಾಡಲು ಅಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಗ್ರಾಮಸ್ಥರಾದ ರಂಗನಾಥ್, ಶಿವು, ನಂದೀಶ್, ಕಾಳೇಗೌಡ, ಹರೀಶ್, ಜಗದೀಶ್, ತಮ್ಮಣ್ಣಗೌಡ, ಆನಂದ, ಶೇಖರ್ ಇದ್ದರು.

## ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ ಸಂವಿಧಾನ

### ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಸಂಸದರ ಅಭಿಮತ : ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಜಾಪ್ರಭುತ್ವ ವ್ಯವಸ್ಥೆ ಕೊಟ್ಟಿರುವ ವ್ಯವಸ್ಥೆಯಿಂದ ದೇಶದ ಪ್ರತಿಯೊಬ್ಬ ನಾಗರಿಕರು ಎಲ್ಲಾ ಕ್ಷೇತ್ರದಲ್ಲೂ ಛಾಪು ಮೂಡಿಸುತ್ತಿದ್ದಾರೆ ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆಯಿಂದ ನಾವೆಲ್ಲರೂ ಇಂದು ಸ್ವತಂತ್ರರಾಗಿದ್ದೇವೆ. ಸಂವಿಧಾನ ಪುಸ್ತಕವನ್ನು ಪಡೆದುಕೊಳ್ಳುವುದಷ್ಟೇ ಅಲ್ಲದೆ ಅಂಬೇಡ್ಕರ್ ಅವರು ಅದರಲ್ಲಿ ಹಾಕಿ ಕೊಟ್ಟಿರುವ ಅಂಶಗಳನ್ನು ತಿಳಿದುಕೊಳ್ಳುವ ಕೆಲಸ ಮಾಡಬೇಕು. ಜೊತೆಗೆ ಮುಂದಿನ ಪೀಳಿಗೆಗೆ ಅವುಗಳ ಕುರಿತಾಗಿ ಮಾಹಿತಿ ತಿಳಿಸುವ ಕೆಲಸ ಮಾಡುವ ಜವಾಬ್ದಾರಿ ಅಧಿಕಾರಿಗಳು, ಚುನಾಯಿತರು, ಅಕ್ಷರಸ್ಥರಾದ ನಮ್ಮೆಲ್ಲರದು ಎಂದರಲ್ಲದೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಸಂವಿಧಾನದಲ್ಲಿರುವ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಡಾ. ಬಿ.ಆರ್. ಅಂಬೇಡ್ಕರ್ ಅವರು ಹಾಕಿ ಕೊಟ್ಟಿರುವಂತಹ ಅಂಶಗಳಾಗಿವೆ. ಚುನಾವಣೆ ಸಂದರ್ಭದಲ್ಲಿ ರೆಸಾರ್ಟ್ ಹೋಟೆಲ್‌ಗಳಲ್ಲಿ ರಜೆಗಳನ್ನು ನೀಡಬೇಕೆಂದು ಸರ್ಕಾರದಿಂದ ಆದೇಶ ಬರುತ್ತದೆ. ಆದರೆ ಜನರು ರಜೆಯನ್ನು ತೆಗೆದುಕೊಂಡು ಪ್ರವಾಸ ಮಾಡಲು ಹೋಗುವಂತಹ ಸ್ಥಿತಿಗಳು ಬಂದಿದೆ. ಹಾಗಾಗಿ ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಗೂ ಸಂವಿಧಾನದ ಹಕ್ಕುಗಳು ಸೌಲಭ್ಯಗಳು ಸಿಗಬೇಕು ಎಂದು ಹೇಳಿದ್ದಾರೆ.

ಪ್ರಪಂಚದ ವಿವಿಧ ದೇಶಗಳಲ್ಲಿ ರಾಜಕೀಯ ಅವ್ಯವಸ್ಥೆಗಳನ್ನು ಕಾಣುತ್ತಿದ್ದೇವೆ. ಸಂವಿಧಾನವನ್ನು ರಚಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ನಾವೆಲ್ಲರೂ ಗೌರವ ಕೊಡುವ ಮೂಲಕ ಸಂವಿಧಾನವನ್ನು ಉಳಿಸಬೇಕು ಮತ್ತು ಮುಂದಿನ ಪೀಳಿಗೆಗೆ ಪ್ರಜಾಪ್ರಭುತ್ವದ ಹಕ್ಕುಗಳ ಕುರಿತಾಗಿ ತಿಳಿಸಬೇಕು ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಪ್ರಜಾಪ್ರಭುತ್ವ ದೇಶದ ಜೀವಾಳವಾಗಿದೆ. ಅದು ಸಂವಿಧಾನದ ಮೂಲಕ ನಮಗೆ ದೊರೆತಿದೆ. ಪ್ರತಿಯೊಬ್ಬರು ಆ ಪ್ರಕ್ರಿಯೆಯಲ್ಲಿ ಭಾಗವಹಿಸಿಅದನ್ನು ಮತ ಚಲಾಯಿಸುವ ಮೂಲಕ ಉಳಿಸಬೇಕು. ಮತ ಚಲಾಯಿಸಲು ನಿರ್ಲಕ್ಷ ಮಾಡಬಾರದು. ಪ್ರಜಾಪ್ರಭುತ್ವ ಸದೃಢವಾಗಬೇಕೆಂದರೆ ಪ್ರತಿಯೊಬ್ಬರು ಮತವನ್ನು ಚಲಾಯಿಸಬೇಕು. ಕಡ್ಡಾಯವಾಗಿ ನಾನು ಮತ ಚಲಾಯಿಸುತ್ತೇನೆ ಮತ್ತು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತೇನೆ ಎಂದು ಸಂಕಲ್ಪ ಮಾಡಬೇಕೆಂದರು.

ನಿವೃತ್ತ ಪ್ರಾಧ್ಯಾಪಕ ಗಿರೀಶ್ ಮಾತನಾಡಿ, ಬೇರು ಮಟ್ಟದಿಂದ ಬಂದಂತಹ ಸಹೃದಯಿ ಅಂಬೇಡ್ಕರ್ ಅವರು ಕಟ್ಟಿಕೊಟ್ಟಿರುವ ಪ್ರಜಾಪ್ರಭುತ್ವ ಇಂದು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಸುಮಾರು 100 ರಿಂದ 106 ದೇಶಗಳಲ್ಲಿ ವಿಜೃಂಭಿಸುತ್ತಿದೆ ಎಂದರು.

ಗ್ರೀಕ್ ದೇಶದ ಪ್ರತ್ಯಕ್ಷ ಪ್ರಜಾಪ್ರಭುತ್ವ, ಕ್ರೈಸ್ತ ನೀಸ್‌ರೋಮ್ ಸಾಮ್ರಾಜ್ಯದಲ್ಲಿ ಪ್ರತಿಪಾದನೆ ಮಾಡಿದ ಪ್ರಜಾಪ್ರಭುತ್ವದ ತತ್ವ, ಜಸ್ಟಿನಿಯನ್ ಕಾನೂನು, >>2

## ಹೊಸನಗರ ಗ್ರಾಮಕ್ಕೆ ಕಾಡಾನೆಗಳ ಲಗ್ಗೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಹೊಸನಗರ ಗ್ರಾಮದಲ್ಲಿ ಮಂಗಳವಾರ ಬೆಳ್ಳಂ–ಬೆಳಿಗ್ಗೆ ಲಗ್ಗೆಯಿಟ್ಟಿರುವ ಕಾಡಾನೆಗಳು ಅಪಾರ ಪ್ರಮಾಣದ ಬೆಳೆ ನಾಶ ಮಾಡಿವೆ.

ಮರಿಗಳು ಸೇರಿ ಹತ್ತಕ್ಕೂ ಹೆಚ್ಚಿರುವ ಕಾಡಾನೆಗಳ ಹಿಂಡು ಮೆಕ್ಕೆಜೋಳ, ಶುಂಠಿ ತಿಂದು, ತುಳಿದು ನಾಶಪಡಿಸಿವೆ. ಹೊಸನಗರ ಗ್ರಾಮದ ಸಮೀಪವಿರುವ ರೈತರ ಜಮೀನುಗಳಲ್ಲಿ ದಾಂಧಲೆ ನಡೆಸಿದ್ದು ಕಾಡಾನೆಗಳನ್ನು ಕಂಡು ಗ್ರಾಮಸ್ಥರು ಭಯಭೀತರಾಗಿದ್ದಾರೆ. ಫಸಲಿಗೆ ಬಂದಿದ್ದ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ.

ಹೊಸನಗರ ಸಮೀಪವೇ ಗಜಪಡೆ ಓಡಾಡುತ್ತಿದ್ದು ಅಕ್ಕಪಕ್ಕದ ಗ್ರಾಮಗಳಿಗೆ ಕಾಡಾನೆಗಳ ಚಲನವಲನದ ಮಾಹಿತಿ ನೀಡುತ್ತಿದ್ದು ಆಗಿರುವ ನಷ್ಟಕ್ಕೆ ಪರಿಹಾರ ನೀಡುವಂತೆ ರೈತರ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಹೆಚ್.ಪಿ. ಶ್ರೀಧರ್‌ಗೌಡ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಾಡಾನೆ ದಾಳಿಯಿಂದ ನಷ್ಟಕ್ಕೀಡಾದ ಬೆಳಗಳಿಗೆ ಪರಿಹಾರ ಕಲ್ಪಿಸಬೇಕು. ಆನೆಗಳು ಜಮೀನಿಗೆ ಲಗ್ಗೆ ಇಡದಂತೆ ಸೋಲಾರ್ ತಂತಿ ಬೇಲಿ ವ್ಯವಸ್ಥೆ ಮಾಡಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

## ಸೆ.19 ರಂದು ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆ

ಹಾಸನ : ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಹಾಸನ ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವು ಸೇರಿದಂತೆ), 2025–26ನೇ ಸಾಲಿನ ಆಗಸ್ಟ್–2025ರ ಅಂತ್ಯಕ್ಕೆ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಸೆ.19 ರಂದು ಬೆಳಿಗ್ಗೆ.10 ಗಂಟೆಗೆ ಹಾಸನ ಜಿ.ಪಂ. ಹೊಯ್ಸಳ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದುಜಿ.ಪಂ. ಸಿಇಒ ತಿಳಿಸಿದ್ದಾರೆ.

## ಗಾಣದಹೊಳೆ ಗ್ರಾಮದಲ್ಲಿ ಹೊಂಬೆಳಕು ಯೋಜನೆ ಅನುಷ್ಠಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಹೆಬ್ಬಸಾಲೆ ಗ್ರಾಮ ಪಂಚಾಯಿತಿಯನ್ನು ಮಾದರಿ ಪಂಚಾಯತಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಹೊಂಬೆಳಕು ಯೋಜನೆಗೆ ಚಾಲನೆ ನೀಡಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಾಣದಹೊಳೆ ಗ್ರಾಮದಲ್ಲಿ ಹೊಂಬೆಳಕು ಯೋಜನೆಯಡಿ ಸ್ವಯಂ ಚಾಲಿತ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ತಾಲ್ಲೂಕಿನ ಹೆಬ್ಬಸಾಲೆ ಗ್ರಾಮ ಪಂಚಾಯಿತಿಯನ್ನು ಮೊದಲಿಗೆ ಹೊಂಬೆಳಕು ಯೋಜನೆಯಡಿ ಸ್ವಯಂ ಚಾಲಿತ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 6 ಕಂದಾಯ ಗ್ರಾಮ ಮತ್ತು 38 ಉಪ ಗ್ರಾಮಗಳ ವ್ಯಾಪ್ತಿಯಲ್ಲಿ ಸ್ವಯಂ ಚಾಲಿತ ಬೀದಿ ದೀಪಗಳನ್ನು ಅಳವಡಿಸಲಾಗುವುದು. ಅದರಿಂದ ಬೀದಿ ದೀಪಗಳನ್ನು ಹಾಕಲು ಹಾಗೂ ಆರಿಸಲು ಕಾರ್ಮಿಕರ ಅನಿವಾರ್ಯತೆ ತಪ್ಪುತ್ತದೆ. ಒಟ್ಟು 95 ವಿದ್ಯುತ್ ಕಂಬಗಳನ್ನು 53 ಕಿ.ಮೀ ವ್ಯಾಪ್ತಿಯಲ್ಲಿ ಅಳವಡಿಸಲಾಗುತ್ತಿದೆ. ಈ ಕಾಮಗಾರಿಗೆ 65 ಲಕ್ಷ ರೂ. ವಿನಿಯೋಗಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಇತರ ಪಂಚಾಯತಿಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದರು.

ಸೆಸ್ಕ್ ಕಾರ್ಯಪಾಲಕ ಅಭಿಯಂತರ ಅರ್ಜುನ್, ಸಹಾಯಕ ಅಭಿಯಂತರರಾದ ಹರೀಶ್, ನಿರಂಜನ್, ಹೆಬ್ಬಸಾಲೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನೇತ್ರಾವತಿ ಮೇಘರಾಜ್, ಸದಸ್ಯರಾದ ಕಾರ್ತಿಕ್, ಶಿವಕುಮಾರಿ, ಮಹೇಶ್ ಶೆಟ್ಟಿ, ಭಾಗ್ಯ ಇತರರಿದ್ದರು.

## ಕ್ಯಾಂಟರ್ ದುರಂತ: ಗಾಯಾಳುಗಳ ಚಿಕಿತ್ಸಾ ವೆಚ್ಚ ಸರ್ಕಾರವೇ ಭರಿಸಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಾಸನ ತಾಲ್ಲೂಕಿನ ಮೊಸಳೆಹೊಸಹಳ್ಳಿ ಗ್ರಾಮದಲ್ಲಿ ಕ್ಯಾಂಟರ್ ಡಿಕ್ಕಿಯಾಗಿ ಗಂಭೀರ ಗಾಯಾಳುಗಳಿಗೆ ಸರ್ಕಾರವೇ ಚಿಕಿತ್ಸಾ ವೆಚ್ಚ ಭರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆಗ್ರಹಿಸಿದರು.

ತಾಲ್ಲೂಕಿನ ಹಿರೀಸಾವೆಯಲ್ಲಿ ಭಗತ್ ಸಿಂಗ್ ಬಾಯ್ಸ್ ವತಿಯಿಂದ ಏರ್ಪಡಿಸಿದ್ದ ಗಣೇಶ ವಿಸರ್ಜನಾ ಮಹೋತ್ಸವದಲ್ಲಿ ಮಾತನಾಡಿದ ಅವರು, ಖಾಸಗಿ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಎಂದು ಒತ್ತಾಯಿಸಿದರು.

ಹಿಂದುತ್ವದ ಭಾವ ಬೆಳೆಸದೆ ಇದ್ದರೆ ದೇಶ ಉಳಿಸಿಕೊಳ್ಳಲು ಆಗುವುದಿಲ್ಲ. ಈಗ ಬ್ರಿಟಿಷರು ಇಲ್ಲವಾದರೂ ಪರಕೀಯ ಆಕ್ರಮಣಕಾರರ ಮನಸ್ಥಿತಿ ಇನ್ನೂ ಇದೆ. ಅದು ಈ ಕಲೋನಿಯಲ್ ರೀತಿ, ಬೇರೆ ಬೇರೆ ರೀತಿಯಲ್ಲಿ ಅಕ್ರಮಣಕಾರರು ಇದ್ದೆ ಇದ್ದಾರೆ. ನಮ್ಮ ದೇಶಕ್ಕೆ ಸಾಂಸ್ಕೃತಿಕ, ಧಾರ್ಮಿಕ ಅಕ್ರಮಣಕಾರರಾಗಿ ಬಂದವರು ಅವರ ಪ್ರಭಾವ ಈಗಲೂ ಬೀರುತ್ತಿದ್ದಾರೆ. ಅವರದ್ದೇ ನಡೆಸುತ್ತಿದ್ದಾರೆ ಎಂದರು.

ದೇಶದಲ್ಲಿ ಹಿಂದುಗಳು ಶೇ. 85 ರಷ್ಟಿದ್ದರೂ ಮುಕ್ತವಾಗಿ ಗಣೇಶೋತ್ಸವ ಮಾಡುವುದು ಕಷ್ಟವಾಗುತ್ತಿದೆ. ನಾವು ಶೇ. 15, 20 ಇದ್ದಿದ್ದರೆ ಏನಾಗಬಹುದು. ಕಸುಬು, ವೃತ್ತಿ ಆಧಾರದಲ್ಲಿ ಜಾತಿ ಹುಟ್ಟಿದ್ದು. ಜಾತಿಗೆ ಮೊದಲು ಇದ್ದಿದ್ದು ವರ್ಣಾಶ್ರಮ. ಹಿಂದು ಸಮಾಜವನ್ನು ದುರ್ಬಲಗೊಳಿಸುವ ಷಡ್ಯಂತ್ರ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ದೇಶ–ಧರ್ಮ ಉಳಿಯಬೇಕು

ನಾವು ಒಟ್ಟಾಗದಿದ್ದರೆ ದೇಶ, ಧರ್ಮ, ನಾವು ಉಳಿಯಲ್ಲ. ಹೆಚ್ಚು ಅಂದರೆ ಇನ್ನೂ ಐವತ್ತು ವರ್ಷ ಉಳಿಯುತ್ತೇವೆ.ಏಕೆ ಅಂದರೆ 30, 40 ವರ್ಷ ಆದರೂ ಹೆಣ್ಣು ಕೊಡ್ತಿಲ್ಲ, ಮದುವೆ ಇಲ್ಲ. ಶ್ರೀಮಂತರು ಮದುವೆಯಾಗಿ ಹತ್ತು ವರ್ಷ ಆದರು ಮಕ್ಕಳು ಮಾಡಿಕೊಂಡಿಲ್ಲ. ಗಂಡು–ಹೆಂಡತಿ ಸರ್ಕಾರಿ ನೌಕರಿಯಲ್ಲಿ ಇದ್ದಾರೆ ಒಂದು ಮಗು ಮಾಡಿಕೊಂಡಿದ್ದಾರೆ. ಅವರಿಗೆ ಒಂದು ಮಗು ಸಾಕಾಗಬಹುದು, ದೇಶಕ್ಕೆ ಸಾಕಾಗಲ್ಲ. ಜನಸಂಖ್ಯೆ ಕಡಿಮೆ ಆದರೆ ದೇಶ, ಸಂಸ್ಕೃತಿ ಕಳೆದುಕೊಳ್ಳತ್ತೇವೆ ಎಂದು ಎಚ್ಚರಿಸಿದರು.

ಅದು ಕಳೆದುಕೊಳ್ಳಬಾರದು ಅಂದರೆ ಹಿಂದೂಗಳ ಸಂಖ್ಯೆ ಕುಸಿಯಬಾರದು. ನಮ್ಮ ಹಿಂದೂ ಜನಸಂಖ್ಯೆ ಕುಸಿದರೆ ನರಮೇಧ ನಡೆಯುತ್ತೆ. ಹಿಂದೂಗಳು ಜನಸಂಖ್ಯೆ ಕುಸಿದರೆ ನಮ್ಮ ದೇವಾಲಯಗಳು ಉಳಿಯಲ್ಲ. ನಮ್ಮ ಊರು, ದೇವತೆಯನ್ನು ಸಹಿಸಿಕೊಳ್ತಾರೆ ಎನ್ನುವ ಭ್ರಮೆ ಬೇಡ ಎಂದರು.

# ಬಸವ ಸಂಸ್ಕೃತಿ ಅಭಿಯಾನಕ್ಕೆ ಎಲ್ಲರೂ ಕೈ ಜೋಡಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹಾಸನದಲ್ಲಿ ಸೆ. 21 ರಂದು ಹಾಸನದಲ್ಲಿ ನಡೆಯುವ ಬಸವ ಸಂಸ್ಕೃತಿ ಅಭಿಯಾನ ಕಾರ್ಯಕ್ರಮಕ್ಕೆ ಜಾತಿ ಬೇಧ ಮರೆತು ಎಲ್ಲರೂ ಪಾಲ್ಗೊಳ್ಳಬೇಕೆಂದು ಪುಷ್ಪಗಿರಿ ಮಹಾಸಂಸ್ಥಾನ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜಾತಿ, ಧರ್ಮ, ವರ್ಗ ಭೇದವಿಲ್ಲದೇ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದು ಕರೆ ನೀಡಿದರು.

ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಪ್ರಚಾರ–ಪ್ರಸಾರಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಸೆಪ್ಟೆಂಬರ್ 21ರಂದು ಬೇಲೂರು ಮಾರ್ಗವಾಗಿ ಹಾಸನಕ್ಕೆ ಬರುವ ಬಸವ ಸಂಸ್ಕೃತಿ ಅಭಿಯಾನಕ್ಕೆ ತಾಲೂಕಿನ ಎಲ್ಲಾ ಸಂಘ ಸಂಸ್ಥೆಗಳು,ವೀರಶೈವ–ಲಿಂಗಾಯತ ಸಮಾಜ ಹಾಗೂ ಬಸವಭಕ್ತರು ಭವ್ಯ ಸ್ವಾಗತ ನೀಡುವಂತೆ ತಿಳಿಸಿದರು.

ಶಾಸಕ ಹೆಚ್.ಕೆ. ಸುರೇಶ್ ಮಾತನಾಡಿ, ಬಸವ ಸಂಸ್ಕೃತಿ ಅಭಿಯಾನದ ನೇತೃತ್ವವನ್ನು ವಹಿಸಿಕೊಂಡಿರುವ ಪುಷ್ಪಗಿರಿ ಶ್ರೀಗಳಿಂದ ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ಕೀರ್ತಿ ತಂದಂತಾಗಿದೆ. ಸೋಮಶೇಖರ ಸ್ವಾಮೀಜಿ ಕೂಡ ಬಸವಣ್ಣನವರ ಹಾದಿಯಲ್ಲಿ ಸಾಗುತ್ತಿದ್ದಾರೆ. ಅವರ ಮಾರ್ಗದರ್ಶನ ನಮ್ಮೆಲ್ಲರಿಗೂ ಇರಲಿ ಎಂದ ಅವರು ಪ್ರಪಂಚದಲ್ಲೇ ಬಸವಣ್ಣನವರನ್ನ ವಿಶ್ವಗುರು ಎಂದು ಕರೆದಿದ್ದಾರೆ ಯಾವುದೇ ಒಂದು ಜಾತಿಗೆ ಸೀಮಿತವಾಗದ ಮಹಾನ್ ವ್ಯಕ್ತಿ ಬಸವಣ್ಣನವರು ಅವರ ಪಾಲನೆಯನ್ನ ಪ್ರತಿಯೊಬ್ಬರು ಪಾಲಿಸಬೇಕು ಬಸವ ಸಂಸ್ಕೃತಿ ಅಭಿಯಾನವನ್ನು ನಾವೆಲ್ಲರೂ ಸೇರಿ ಯಶಸ್ವಿಗೊಳಿಸೋಣ ಎಂದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ವಿಶ್ವಗುರು ಬಸವಣ್ಣನವರ ಆದರ್ಶಗಳನ್ನ ನಾವೆಲ್ಲರೂ ಪಾಲನೆ ಮಾಡುವ ಮೂಲಕ ಈ ದೇಶದ ಅಭಿವೃದ್ಧಿಗೆ ಶ್ರಮಿಸೋಣ ಎಂದರು,

ಈ ಸಂದರ್ಭದಲ್ಲಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮೂಲಕ ಬಸವಣ್ಣನವರ ಸಾಂಸ್ಕೃತಿಕ ಅಭಿಯಾನ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಲಾಯಿತು.

ಅಖಿಲ ಭಾರತ ವೀರಶೈವ ಸಮಾಜ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಬಸವರಾಜು, ಮಹಿಳಾಧ್ಯಕ್ಷೆ ಮಿಂಪು ಸಂತೋಷ್, ವಾಣಿಜ್ಯ ಮತ್ತು ಕೈಗಾರಿಕಾ ವಿಭಾಗದ ರಾಜ್ಯ ನಿರ್ದೇಶಕ ಚೇತನ್ ಗೆಂಡೆಹಳ್ಳಿ, ಯುವ ಘಟಕದ ಅಧ್ಯಕ್ಷ ಚೇತನ್, ಮುಖಂಡರಾದ ಅದ್ದೂರಿ ಕುಮಾರ್, ರಾಜ್ಯ ಕಾರ್ಯದರ್ಶಿ ವಿಕ್ರಂ ಕೌರಿ, ಬಲ್ಲೇನಹಳ್ಳಿ ರವಿಕುಮಾರ್, ನಿಂಗರಾಜು, ಯೋಗೇಶ್, ರೇಣುಕುಮಾರ್, ಮಹದೇವ್, ಪಾಲಾಕ್ಷ, ಸಂಜು ಕೌರಿ, ಮದನ್ ಬಳ್ಳೂರು, ಪರ್ವತಯ್ಯ ಇತರರಿದ್ದರು.

# ನಿಶ್ಚಿತ ಗುರಿಯೊಂದಿಗೆ ವಿದ್ಯಾಭ್ಯಾಸ ಮಾಡಿದರೆ ಯಶಸ್ಸು

## ಅಕ್ಷರ ಬುಕ್ ಹೌಸ್‌ನಿಂದ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ : ಡಾ. ಬಿ.ಕೆ. ಸೌಮ್ಯಮಣಿ ಅಭಿಪ್ರಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜೀವನದಲ್ಲಿ ಏನಾಗಬೇಕೆಂಬ ಗುರಿಯೊಂದಿಗೆ ಯುವಕರು ಶಿಕ್ಷಣ ಪಡೆದುಕೊಂಡು ಬದುಕು ಕಟ್ಟಿಕೊಳ್ಳಬೇಕು ಎಂದು ರೋಟರಿ ವಲಯ 9ರ ಮಾಜಿ ಸಹಾಯಕ ಗವರ್ನರ್ ಹಾಗೂ ಡಾ. ಸೌಮ್ಯ ಮಣಿ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮ ಗಾಂಧೀ ಭವನದಲ್ಲಿ ಅಕ್ಷರ ಬುಕ್ ಹೌಸ್, ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಕಳೆದ ಸಾಲಿನ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಅಕ್ಷರ ಪುರಸ್ಕಾರ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಬಹುತೇಕ ಯುವಕರು ತಮ್ಮ ಜೀವನದ ಗುರಿಯನ್ನು ಬೇರೆ ಇಟ್ಟುಕೊಂಡು ಇನ್ಯಾವುದೊ ಶಿಕ್ಷಣ ಪಡೆಯುತ್ತಿದ್ದಾರೆ. ಹಾಗಾಗಬಾರದು ತಾವುಗಳು ಏನಾಗಬೇಕೆಂಬ ಗುರಿಯಿಟ್ಟು ಅದಕ್ಕೆ ಪೂರಕವಾಗಿ ಶಿಕ್ಷಣ ಪಡೆದುಕೊಳ್ಳಬೇಕು. ಹಾಗಾದಲ್ಲಿ ಮಾತ್ರ ಸಮಾಜದಲ್ಲಿ ಸಾಧನೆ ಮಾಡಲು ಸಹಾಯಕವಾಗುತ್ತದೆ. ಯುವ ಪೀಳಿಗೆಗೆ ದೊಡ್ಡ ಮಾರಕವಾಗಿರುವುದು ಜಂಗಮವಾಣಿ (ಮೊಬೈಲ್). ಸರ್ವೆಯ ಪ್ರಕಾರ ಬಹುತೇಕ ಯುವ ಸಮುದಾಯ ದಿನದಲ್ಲಿ 8 ಗಂಟೆಗಳ ಕಾಲ ಮೊಬೈಲ್ ವೀಕ್ಷಣೆ ಮಾಡುವ ಮೂಲಕ ಜೀವನದ ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಇದರಿಂದ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ನಾನಾ ತರನಾದ ಕಾಯಿಲೆಗಳಿಂದ ಬಳಲುವಂತಾಗಿದೆ ಎಂದರು.

ಜೀವನದಲ್ಲಿ ಉತ್ತಮ ಶಿಕ್ಷಣ ಪಡೆದು ಸಾಧನೆ ಮಾಡಬೇಕಾದರೆ ಆರೋಗ್ಯ ಕಾಪಾಡಿಕೊಳ್ಳಬೇಕಾಗಿರುವುದು ಅಷ್ಟೇ ಮುಖ್ಯ. ಹಾಗಾಗಿ ಯೋಗ, ಧ್ಯಾನ, ಏಕಾಗ್ರತೆಯಿಂದ ಇರುವುದನ್ನು ಮೈಗೂಡಿಸಿಕೊಳ್ಳುವುದು ಅತ್ಯಗತ್ಯ. ನಿತ್ಯ ನಿಯಮಿತವಾದ ವ್ಯಾಯಮ ಮಾಡುವುದು ಸೇರಿದಂತೆ ಗುಣಮಟ್ಟದ ಆಹಾರ ಸೇವನೆ ಹೀಗೆ ಅಲ್ಲಾ ರೀತಿಯಾಗಿ ನಾವುಗಳು ಆರೋಗ್ಯ ಕಾಪಾಡಿಕೊಳ್ಳಬೇಕು. ನಾವುಗಳು ಇಂದು ಎಷ್ಟೇ ತಾಂತ್ರಿಕವಾಗಿ ಮುಂದುವರೆದಿದ್ದರು, ತಂತ್ರ ಜ್ಞಾನದ ಮೂಲಕ ಶಿಕ್ಷಣ ಪಡೆದುಕೊಂಡರು ಈ ಹಿಂದಿನ ಶಿಕ್ಷಣ ವ್ಯವಸ್ಥೆಗೆ ಸರಿಸಮವಾಗಲು ಸಾಧ್ಯವಿಲ್ಲ. ಇಂದು ಎ.ಐ. ಸೇರಿದಂತೆ ನಾನಾ ಬಗೆಯ ಸಾಧನಗಳ ಮೂಲಕ ಶಿಕ್ಷಣ ಪಡೆದುಕೊಳ್ಳುತ್ತಿದ್ದರು, ನಾವುಗಳು ತರಗತಿಗಳಿಗೆ ತೆರಳಿ ಶಿಕ್ಷಕರು ಬೋಧನೆ ಮಾಡಿರುವುದನ್ನು ಕೇಳಿ ಅದನ್ನು ಅಧ್ಯಯನ ಮಾಡುವುದೇ ಹೆಚ್ಚುಕಾಲ ಉಳಿಯುವಂತಹದು. ಪುಸ್ತಕಗಳನ್ನು ಓಧಿಸುವುದೇ ಒಂದು ದೊಡ್ಡ ಸಾಧನೆಯಾಗಿದೆ ಇಂದು, ಮಕ್ಕಳನ್ನು ಉತ್ತಮ ಪುಸ್ತಕಗಳನ್ನು ಓದುವಂತೆ ಮಾಡಬೇಕೆಂಬ ಹಂಬಲ ದಿಂದ ಇಂದು ಟೈಮ್ಸ್ ಗಂದಾಧರ್ ಅವರು ಅತ್ಯುತ್ತಮ ಅಂಕ ಪಡೆದು ಸಾಧನೆ ಮಾಡಿದ ಮಕ್ಕಳಿಗೆ ಪಾರಿತೋಷಕಗಳನ್ನು ನೀಡುವುದರ ಬದಲಾಗಿ ಪುಸ್ತಕಗಳನ್ನು ನೀಡಿ ಸನ್ಮಾನಿಸುತ್ತಿರುವುದು ಇತರರಿಗೆ ಮಾದರಿ ಎಂದು ಹೇಳಿದರು.

ಉದ್ಯಮಿ ವಿಜಯ ಕುಮಾರ್ ಮಾತನಾಡಿ, ಸಮಾಜ ನಮಗೆ ಎಲ್ಲದನ್ನು ನೀಡಿದ ಮೇಲೆ ನಾವು ಸಮಾಜಕ್ಕೆ ಪುನಃ ಏನನ್ನಾದರು ನೀಡಬೇಕೆಂಬ ಆಲೋಚನೆ ಎಲ್ಲರಿಗೂ ಬರುವುದಿಲ್ಲ. ಸಮಾಜಕ್ಕೆ ಮುಂದಿನ ಆಧಾರ ಸ್ತಂಭವಾಗುವ ಮಕ್ಕಳಿಗೆ ಪುಸ್ತಕಗಳನ್ನು ನೀಡುವುದರ ಮೂಲಕ ಸ್ವಸ್ಥ ಹಾಗೂ ಉತ್ತಮ ಸಮಾಜವನ್ನು ಕಟ್ಟುವ ಕೆಲಸವನ್ನು ಅಕ್ಷರ ಬುಕ್ ಹೌಸ್‌ನ ತಂಡ ಮಾಡುತ್ತಿದೆ.

ಇಂತಹ ಕಾರ್ಯಕ್ರಮಗಳಿಗೆ ಸಮಾಜದ ಪ್ರತಿಯೊಬ್ಬರು ಕೈಜೋಡಿಸಿದರೆ ಭವಿಷ್ಯದಲ್ಲಿ ಪ್ರತಿಯೊಬ್ಬರ ಮನೆಯ ಮಕ್ಕಳು ಸಮಾಜಕ್ಕೆ ಮಾದರಿಯಾಗುವುದರಲ್ಲಿ ಆಶ್ಚರ್ಯವಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಕ್ಷರ ಬುಕ್ ಹೌಸ್ ಮಾಲೀಕ ಬಿ.ಕೆ. ಗಂಗಾಧರ್ ಮಾತನಾಡಿ, ಜಿಲ್ಲೆಯಲ್ಲಿ ಪುಸ್ತಕದ ಅಂಗಡಿ ಮಾಡಿ ಇಂದಿಗೆ ಹತ್ತು ವರ್ಷ ಕಳೆದಿದೆ, ಇಂದಿಗೂ ನಮ್ಮ ಪುಸ್ತಕದ ಅಂಗಡಿ ಬಹುತೇಕರಿಗೆ ತಿಳಿದಿಲ್ಲ. ಇದರ ಅರ್ಥ ಇಂದಿನ ಯುವ ಸಮುದಾಯ ಹಾಗೂ ಕೆಲವು ಜನ ಸಾಮಾನ್ಯರು ಎಷ್ಟರ ಮಟ್ಟಿಗೆ ಪುಸ್ತಕದ ಪ್ರೇಮ ಇಟ್ಟುಕೊಂಡಿದ್ದಾರೆ ಎಂಬುವುದನ್ನು ತಿಳಿಸುತ್ತದೆ. ಪ್ರತಿ ವರ್ಷ ಲಕ್ಷಂತಾರ ರೂ ವೆಚ್ಚ ಮಾಡಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅಧಿಕ ಅಂಕ ಪಡೆದವರಿಗೆ ನಾಲ್ಕೈದು ಪುಸ್ತಕಗಳನ್ನು ನೀಡುತ್ತಾ ಬರಲಾಗುತ್ತಿದೆ. ಇದರ ಉದ್ದೇಶ ಕನಿಷ್ಟ ಪಕ್ಷ ಮಕ್ಕಳಿಗೆ ಎಷ್ಟು ಓದಿಸಲು ಸಾಧ್ಯವಾಗುತ್ತದೆ ಅಷ್ಟನಾದರೂ ಓದಿಸಬೇಕೆಂಬ ಹಂಬಲ ನಮ್ಮದಾಗಿದೆ. ಸಾಮಾನ್ಯ ಶಿಕ್ಷಕರ ಮಗನಾಗಿ ಓದಿ ನಾನು ಕೂಡ ಭೌತಶಾಸ್ತ್ರ ಉಪನ್ಯಾಸಕನಾಗಿ ಇಂದು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಅನೇಕ ಮಕ್ಕಳಿಗೆ ವಿದ್ಯಾಧಾನ ಮಾಡುತ್ತಿದ್ದು, ಸಮಾಜನ ನಮಗೆ ಎಲ್ಲಾವುದನ್ನು ಕೊಟ್ಟಿದೆ. ಹಾಗಾಗಿ ಸಮಾಜಕ್ಕ ಪುನಃ ಏನನ್ನಾದರೂ ನೀಡಬೇಕೆಂಬ ಆಸೆಯೊಂದಿಗೆ ಹಾಸನ ನಗರದಲ್ಲಿ ಅಕ್ಷರ ಬುಕ್ ಹೌಸ್ ಹಾಗೂ ಅಕ್ಷರ ಅಕಾಡೆಮಿಗಳನ್ನು ಕಟ್ಟಿ ನಮ್ಮ ಮುಂದಿನ ಯುವ ಸಮುದಾಯಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಯುವಕರು ಪುಸ್ತಕಗಳನ್ನು ಓದ ಬೇಕೆಂಬುವುದೊಂದಿಗೆ ನಮ್ಮ ಆಸೆ ಅದರೊಂದಿಗೆ ಓದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಪಡೆದು ಗಣ್ಯ ವ್ಯಕ್ತಿಗಳಾಗುವ ಮೂಲಕ ಪುನಃ ಸಮಾಜದ ಸೇವೆ ತೊಡಗುವಂತಾಗಬೇಕೆಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

**400 ಮಕ್ಕಳಿಗೆ ಸನ್ಮಾನ:**

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಕಳೆದ ಸಾಲಿನ ಅತೀ ಹೆಚ್ಚು ಅಂಕ ಪಡೆದ ಸುಮಾರು 400 ವಿದ್ಯಾರ್ಥಿಗಳಿಗೆ ಸಾವಿರ ರೂ ಬೆಲೆ ಬಾಳುವ ವಿವಿಧ ಲೇಖಕರ ಪುಸ್ತಕಗಳನ್ನು ನೀಡಿ ಅವರುಗಳನ್ನು ಸನ್ಮಾನಿಸಲಾಯಿತು.

ಶಿಕ್ಷಕರ ದಿನಾಚರಣೆ ಅಂಗವಾಗಿ ವಿವಿಧ ಸರ್ಕಾರಿ ಕಾಲೇಜು ಹಾಗೂ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಶಿಕ್ಷಕರು ಹಾಗೂ ಉಪನ್ಯಾಸಕರು, ಅಧ್ಯಾಪಕರ ನ್ನು ಇದೇ ವೇಳೆ ಸನ್ಮಾನಿಸಿ ಗೌರವಿಸಲಾಯಿತು.

ರೋಟರಿ ವಲಯ 9ರ ಸಹಾಯಕ ಗೌವರ್ನರ್ ಮಂಜುನಾಥ್, ವಲಯ ಸೇನಾನಿ ಮಮತ ಪಟೇಲ್, ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಕಾರ್ಯದರ್ಶಿ ಪಿ. ರವಿಕುಮಾರ್, ಖಜಾಂಚಿ ಎಚ್.ಕೆ. ದಿಲೀಪ್ ಕುಮಾರ್ ಹಾಜರಿದ್ದರು.

# ಸ್ಕೌಟ್ಸ್–ಗೈಡ್ಸ್‌ನಿಂದ ಮಕ್ಕಳಲ್ಲಿ ಜವಾಬ್ದಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಸೇವೆ ಮತ್ತು ಪ್ರಾಯೋಗಿಕ ಚಟುವಟಿಕೆಯ ಮೂಲಕ ಕಲಿಕೆಯನ್ನು ಸದೃಢಗೊಳಿಸುತ್ತಾ ಜೀವನೋತ್ಸಾಹ ತುಂಬುವಂತಹ ಸ್ಕೌಟ್ಸ್–ಗೈಡ್ಸ್ ಘಟಕಗಳನ್ನು ಶಾಲೆಯಲ್ಲಿ ತೆರೆಯುವುದು ಶಾಲೆಗೆ ಹೆಮ್ಮೆ ಎಂದು ವಿದ್ಯಾಸೌಧ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಪರಮೇಶ್ ಹಲಗೇರಿ ಅಭಿಪ್ರಾಯಪಟ್ಟರು.

ಭಾರತ್ ಸ್ಕೌಟ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ವಿಜಯನಗರ ಬಡಾವಣೆಯಲ್ಲಿರುವ ವಿದ್ಯಾ ಸೌಧ ಪಬ್ಲಿಕ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ನೂತನ ಘಟಕ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯ ಸಂಘಟನಾ ಆಯುಕ್ತೆ ಹೆಚ್.ಎಂ. ಪ್ರಿಯಾಂಕ ಮಾತನಾಡಿ, ವಿವಿಧ ವಯೋಮಾನದಲ್ಲಿ ಮಕ್ಕಳು ಭಾಗವಹಿಸಬಹುದಾದಂತಹ ವಿಭಾಗಗಳಾದ ಕಬ್ಸ್–ಬುಲ್ಬುಲ್ಸ, ಸ್ಕೌಟ್ಸ್– ಗೈಡ್ಸ್, ರೋವರ್ಸ್ ರೇಜರ್ಸ್ ಬಗ್ಗೆ ಪರಿಚಯಿಸಿದರು.

ನಿಕಟ ಪೂರ್ವ ಜಂಟಿ ಕಾರ್ಯದರ್ಶಿ ಕಾಂಚನಮಾಲ ಅವರು ಸ್ಕೌಟಿಂಗ್ ಇತಿಹಾಸವನ್ನು ಪರಿಚಯಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಬಿಎಸ್ ವನಜಾಕ್ಷಿ ಅವರು ಸೈನ್ಯಾಧಿಕಾರಿಯಾಗಿದ್ದ ಲಾರ್ಡ್ ಸ್ಟೀಫನ್ ಸನ್ ಸ್ಮಿತ್ ಬೇಡನ್ ಪೊವೆಲ್ ರವರು ಯುವ ಶಕ್ತಿಯ ಸದ್ಬಳಕೆಗಾಗಿ ಈ ಒಂದು ಜಾಗತಿಕ ಸಂಸ್ಥೆಯನ್ನ ಸ್ಥಾಪಿಸಿದರು. ಇದು ಜಗತ್ತಿನ ಸುಮಾರು 216ಕ್ಕೂ ಹೆಚ್ಚು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಸ್ವಯಂ ಶಿಸ್ತು, ಸೇವೆ, ಜವಾಬ್ದಾರಿ ನಿರ್ವಹಣೆ ಹಾಗೂ ನಾಯಕತ್ವ ಬೆಳವಣಿಗೆ, ಸ್ಕೌಟಿಂಗ್ ನಿಂದ ಜಾಗೃತವಾಗಿ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ. ಇಲ್ಲಿ ವಿವಿಧ ಹಂತದ ಪರೀಕ್ಷೆಗಳಿದ್ದು ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರಗಳಂತಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರಿಂದ ಉನ್ನತ ಶಿಕ್ಷಣಕ್ಕೂ ಮೀಸಲಾತಿ ದೊರೆಯುತ್ತದೆ.ಎಂದರು.

ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ ನೂತನವಾಗಿ ಶಾಲೆಯಲ್ಲಿ ಘಟಕ ಸ್ಥಾಪಿಸಿ ಪಠ್ಯೇತರ ಚಟುವಟಿಕೆಯ ಮೂಲಕ ಮಕ್ಕಳಲ್ಲಿರುವ ಕೌಶಲವನ್ನು ಪತ್ತೆ ಹಚ್ಚಿ, ವಿದ್ಯಾರ್ಥಿಗಳನ್ನು ಕ್ರಿಯಾಶೀಲವಾಗಿಡುವ ನಿಟ್ಟಿನಲ್ಲಿ ಶಾಲೆ ಪ್ರಯತ್ನಿಸಿರುವುದು ಅಭಿನಂದನಾ ಅರ್ಹ, ನಗರದ ಅತ್ಯುತ್ತಮ ಸ್ಕೌಟ್ಸ್ ಮತ್ತೆ ಗೈಡ್ ಘಟಕ ನಿಮ್ಮದಾಗಲಿ ಅದಕ್ಕೆ ಬೇಕಾಗುವ ಎಲ್ಲಾ ನೆರವನ್ನು ಸ್ಥಳೀಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ನಿಮಗೆ ನೀಡುತ್ತದೆ ಎಂದು ಶುಭ ಹಾರೈಸಿದರು.

ವಿದ್ಯಾಸೌಧ ಪಬ್ಲಿಕ್ ಶಾಲೆಯ ಉಪ ಪ್ರಾಂಶುಪಾಲ ಮೋಹನ್ ಕುಮಾರ್, ಡಿ.ಟಿ. ಪೂರ್ಣಿಮಾ ಇತರರಿದ್ದರು.

# ಅಡ್ಡಾದಿಡ್ಡಿ ವಾಹನ ಓಡಿಸಿ ಆತಂಕ ಸೃಷ್ಟಿಸಿದ ಚಾಲಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕೆ.ಆರ್. ಪುರಂನಲ್ಲಿ ಗೂಡ್ಸ್ ವಾಹನ ಚಾಲಕನೊಬ್ಬ ಕುಡಿದ ಅಮಲಿನಲ್ಲಿ ಅಡ್ಡಾದಿಡ್ಡಿಯಾಗಿ ವಾಹನ ಓಡಿಸಿ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ್ದಾನೆ.



ಮದ್ಯದ ಅಮಲಿನಲ್ಲಿ ವಾಹನ ಚಲಾಯಿಸಿ ಹಲವು ವಾಹನಗಳಿಗೆ ಡಿಕ್ಕಿ ಹೊಡೆದು ಎಸ್ಕೇಪ್ ಆಗಲು ಯತ್ನಿಸಿದ್ದ ಆತನನ್ನು ಸಾರ್ವಜನಿಕರೇ ಸುಮಾರು 10 ಕಿ.ಮೀ. ಬೆನ್ನಟ್ಟಿ ಹಿಡಿದು ಧರ್ಮದೇಟು ನೀಡಿದ್ದಾರೆ. ನಂತರ ಪೊಲೀಸರಿಗೆ ಒಪ್ಪಿಸಿದ್ದಾರೆ. ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನ ಚಾಲಕನ ದುರ್ವರ್ತನೆ ಜನರ ಪ್ರಾಣಕ್ಕೆ ಕುತ್ತು ತಂದಿದ್ದು ಪ್ರಾಣ ಹಾನಿಯಿಂದ ಜನರು ಕೂದಲೆಳೆ ಅಂತರದಲ್ಲಿ ತಪ್ಪಿಸಿಕೊಂಡಿದ್ದಾರೆ. ಬಡಾವಣೆ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಚಾಲಕನ ನಿರ್ಲಕ್ಷ್ಯ ಚಾಲನೆಯ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

# ಜಾತಿ ಗಣತಿಯಿಂದ ಶಿಕ್ಷಕರ ಕೈ ಬಿಡಲು ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯದಿಂದ ಕೆಲವು ಶಿಕ್ಷಕರಿಗೆ ವಿನಾಯಿತಿ ನೀಡಬೇಕೆಂದು ಒತ್ತಾಯಿಸಿ ತಾಲ್ಲೂಕು ಸರ್ಕಾರಿ ನೌಕರರ ಸಂಘದಿಂದ ಉಪವಿಭಾಗಾಧಿಕಾರಿ ರಾಜೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸೆ. 22 ರಿಂದ ಅ. 7ರ ವರೆಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಗಣತಿ ಕಾರ್ಯದಿಂದ 55 ವರ್ಷ ಮೇಲ್ಪಟ್ಟ ನಿವೃತ್ತಿ ಅಂಚಿನಲ್ಲಿರುವ ಎಲ್ಲಾ ಶಿಕ್ಷಕರು ಹಾಗೂ ಇತರೆ ಇಲಾಖೆ ನೌಕರರು ಹಾಗೂ ಗರ್ಭಿಣಿಯರು, ಬಾಣಂತಿಯರು, ವಿಕಲಚೇತನರು, ಅನಾರೋಗ್ಯ ಪೀಡಿತರನ್ನು ಗಣತಿ ಕಾರ್ಯಕ್ಕೆ ನಿಯೋಜಿಸುತ್ತಿರುವುದು ತಿಳಿದು ಬಂದಿದೆ. ಮಾನಸಿಕ ಹಾಗೂ ದೈಹಿಕ ಆರೋಗ್ಯ ದೃಷ್ಟಿಯಿಂದ ಗಣತಿ ಸಮೀಕ್ಷಾ ಕಾರ್ಯದಿಂದ ವಿನಾಯಿತಿ ನೀಡುವಂತೆ ಮನವಿ ಸಲ್ಲಿಸಿದರು.ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಮ್ಮಣ್ಣ ಶೆಟ್ಟಿ, ಕಾರ್ಯದರ್ಶಿ ಜಗದೀಶ್, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷೆ ರೇಣುಕಾ ಇನ್ನಿತರರು ಹಾಜರಿದ್ದರು.

# ದೇಹದ ಮೇಲೆ ಔಷಧಿಗಳ ದುಷ್ಪರಿಣಾಮ

**–ಚೇತನ್ ಗುರೂಜಿ, ಬಸವ ಯೋಗ ಕೇಂದ್ರ ಕೇಂದ್ರ ಅಡಗೂರು**



ಮನುಷ್ಯನ ಜನನ ಭೂಮಿ ಮೇಲೆ ಆದಮೇಲೆ ಬಹಳಷ್ಟು ಸಂಶೋಧನೆಗಳು ಅನೇಕ ವಿಸ್ಮಯಗಳನ್ನು ಸೃಷ್ಟಿಸಿದ್ದಾನೆ. ಜೊತೆಗೆ ದೇಹದ ಮೇಲೆ ಆಗುವ ಅನೇಕ ಅನಾರೋಗ್ಯದ ತೊಂದರೆಗಳಿಗೂ ಔಷಧಿಗಳನ್ನು ಕಂಡು ಹಿಡಿದಿದ್ದಾನೆ. ಅಂತಹ ಔಷಧಿಗಳ ಬಳಕೆಯಿಂದ ತನ್ನ ರೋಗವನ್ನು ಗುಣಪಡಿಸಿಕೊಂಡ ನಿದರ್ಶನ ಕಾಣಬಹುದು ಮತ್ತು ಅವುಗಳ ಅತಿ ಹೆಚ್ಚು ಬಳಕೆಯಿಂದ ಆಗುವಂತಹ ಅಡ್ಡಪರಿಣಾಮ ಅನುಭವಿಸುತ್ತಿದ್ದಾನೆ.

ಏನೇ ಆಗಲಿ ಸಾವಿರಾರು ವರ್ಷಗಳಿಂದ ಈ ಪ್ರಕೃತಿಯಲ್ಲಿ ಸಿಗುವ ಅನೇಕ ಗಿಡಮೂಲಿಕೆಗಳ ಔಷಧಿ ಸಸ್ಯಗಳನ್ನೇ ಬಳಸಿಕೊಂಡು ಆರೋಗ್ಯವಾಗಿದ್ದ ಮನುಷ್ಯ ಕೇವಲ ಇನ್ನೂರು ವರ್ಷಗಳ ಈಚೆಗೆ ಕಂಡುಕೊಂಡ ಇಂಗ್ಲೀಷ್ ಔಷಧಿಗಳು ಬಹಳ ಬೇಗ ಗುಣಪಡಿಸುತ್ತವೆ ಎಂಬ ನಂಬಿಕೆಯಿಂದ ಹೆಚ್ಚು ಬಳಸುತ್ತಾ 21ನೇ ಶತಮಾನದಲ್ಲಿ ಅಲೋಪತಿ ಚಿಕಿತ್ಸೆ ಮತ್ತು ಔಷಧಿಗಳ ಬಳಕೆ ಹೆಚ್ಚಾಗಿದೆ. ಅದರಿಂದ ಅನುಕೂಲಗಳಿಗಿಂತ ಆಗುತ್ತಿರುವ ತೊಂದರೆಯೇ ಹೆಚ್ಚೆಂದು ಅರಿವಿಗೆ ಬಂದಿದ್ದರು ಬದಲಾಗುತ್ತಿಲ್ಲ. ಏನು ಮಾಡುವುದು ಈಗ ಯಾವುದರ ಆಯ್ಕೆಯನ್ನು ಮಾಡಿಕೊಳ್ಳುವುದು ಎಂಬ ದ್ವಂದ್ವದಲ್ಲಿ ಸಿಕ್ಕಿ ಒದ್ದಾಡುತ್ತಿರುವವರ ಸಂಖ್ಯೆಯೇ ಜಾಸ್ತಿ. ನಿಸರ್ಗದ ನಿಯಮಗಳನ್ನು ಅನುಸರಿಸಲಾಗದೆ ಈ ಕಡೆ ಇಂಗ್ಲಿಷ್ ಔಷಧಿಗಳ ಸೇವನೆಯನ್ನು ಬಿಡಲಾರದೆ ಇರುವಂತಹ ಸ್ಥಿತಿಯಲ್ಲಿ ಇದ್ದೇವೆ. ಇದನ್ನರಿತ ವಿಶ್ವ ಆರೋಗ್ಯ ಸಂಸ್ಥೆ ಮನುಷ್ಯನ ಆರೋಗ್ಯಕ್ಕೆ ಎಷ್ಟು ಔಷಧಿಗಳು ಬೇಕೆಂಬ ನಿರ್ಧಾರ ಮಾಡಲು ಒಂದು ಸಮಿತಿ ನೇಮಿಸಿ ಬಂದ ವರದಿಯ ಪ್ರಕಾರ ಆರೋಗ್ಯವಾಗಿರಲು 107 ಔಷಧಿ ಸಾಕೆಂದು ತಿಳಿಸಿತು. ಇಂದು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವ ಔಷಧಿಗಳ ಸಂಖ್ಯೆ ಎರಡು ಲಕ್ಷಕ್ಕಿಂತಲೂ ಅಧಿಕವಾಗಿದೆ. ಹಾಗಾದರೆ ಇವು ಆರೋಗ್ಯ ಸುಧಾರಿಸಲು ಇರುವಂತವುಗಳೇ ಅಥವಾ ಹಣ ಗಳಿಸಲಿಕ್ಕಾಗಿ ಸೃಷ್ಟಿಸಿರುವಂಥವುಗಳೇ ಯೋಚಿಸಬೇಕಾಗಿರುವ ಸಂದರ್ಭ. ಸಣ್ಣ ಕಾಯಿಲೆಗಳಿಗೆ ತೆಗೆದುಕೊಳ್ಳುವ ಮಾತ್ರೆಗಳೇ ಮುಂದೆ ದೊಡ್ಡ ಸಮಸ್ಯೆಯನ್ನು ತಂದೊಡ್ಡುತ್ತಿರುವ ನಿದರ್ಶನಗಳು ಕಣ್ಣ ಮುಂದಿದ್ದರು ನಾವುಗಳು ಅದೇ ತಪ್ಪನ್ನು ಮುಂದುವರಿಸುತ್ತಿದ್ದೇವೆ. ಉದಾಹರಣೆ ಸಹಿತ ಹೇಳಿದರೆ ತಿಳಿಯಬಹುದು ಚನ್ನರಾಯಪಟ್ಟಣದ ಮಾಜಿ ಶಾಸಕ ಪುಟ್ಟೇಗೌಡರು ಹೇಳುತ್ತಿದ್ದರು. ನಾನು ಕಾಲು ನೋವಿಗೆಂದು ತೆಗೆದುಕೊಂಡ ನೋವು ನಿವಾರಕ ಮಾತ್ರೆ ಆ ಕ್ಷಣದಲ್ಲಿ ನನಗೆ ಚೈತನ್ಯ ಕೊಡುತ್ತಿತ್ತು. ಇದನ್ನೇ ಹತ್ತಾರು ವರ್ಷಗಳ ಕಾಲ ಸೇವಿಸಿದ ಪರಿಣಾಮ ನನ್ನ ಲಿವರ್ ಕೈಕೊಟ್ಟಿತು. ಶಾಸಕರ ನಿಧಿಯಿಂದ ಹಣ ಬಂತು ಲಿವರ್ ಕಸಿ ಮಾಡಿಸಿ ಬದುಕಿದೆ. ಆದರೆ ನೀವು ಅಂತಹ ತಪ್ಪುಗಳನ್ನು ಮಾಡಬೇಡಿ ಅದಕ್ಕೋಸ್ಕರನೇ ಈ ಯೋಗ ಶಿಬಿರವನ್ನು ನಿಮ್ಮೆಲ್ಲರಿಗೂ ಅನುಕೂಲವಾಗಲೆಂದು ಸ್ವತಹ ಆಯೋಜಿಸಿ ವ್ಯವಸ್ಥೆ ಮಾಡಿಕೊಟ್ಟ ಸಂದರ್ಭದಲ್ಲಿ ಈ ಮಾತನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು. ಮತ್ತೊಂದು ಉದಾಹರಣೆ ಪರಿಚಿತರಾದ ವೃತ್ತಿಯಲ್ಲಿ ಖಾಸಗಿ ಶಾಲೆಯ ಶಿಕ್ಷಕರಾಗಿದ್ದವರು ಶಾಲೆಯ ಒತ್ತಡದ ನಡುವೆ ಸಿಟ್ಟು ಜಾಸ್ತಿ ಇತ್ತು. ಅಲ್ಲದೆ ಸಂಸಾರದ ಜವಾಬ್ದಾರಿಯ ನಡುವೆ ಆರೋಗ್ಯದ ಕಡೆಗೆ ಅಷ್ಟಾಗಿ ಗಮನ ಕೊಡಲಾಗುತ್ತಿರಲಿಲ್ಲ ಸ್ವತ: ನಾನು ಹೇಳುತ್ತಿದ್ದೆ ಇಷ್ಟು ಒತ್ತಡ ತೆಗೆದುಕೊಳ್ಳಬೇಡಿ ಇದರಿಂದ ಮುಂದೆ ಅನಾರೋಗ್ಯದ ಸಮಸ್ಯೆಗಳು ಬರಬಹುದೆಂದು ಅವಾಗ ಅವರು ಹೇಳುತ್ತಿದ್ದರು. ಈಗಾಗಲೇ ಆರ್ಥರೆಟಿಸ್ (ಕೀಲು ನೋವುಗಳು) ಬಂದಿದೆ ಏನು ಮಾಡುವುದು, ನೋವು ನಿವಾರಕ ಮಾತ್ರೆ ಸೇವಿಸುವುದೊಂದೇ ಮಾರ್ಗವೆಂದು ಅದನ್ನೇ ಮುಂದುವರಿಸುತ್ತಾ ಬಂದರು. ಕೆಲವರು ವರ್ಷಗಳ ನಂತರ ಲಿವರ್ ಸಮಸ್ಯೆ ಬಂದು ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದರು. ಅನಂತರ ಇನ್ನೊಬ್ಬರ ಸಹಾಯದಿಂದ ಲಿವರ್ ಪಡೆದು 75 ಲಕ್ಷ ರೂ. ಖರ್ಚು ಮಾಡಿದೆ ಮರುಜನ್ಮ ಬಂದಿದೆಂದು ಹೇಳುತ್ತಿದ್ದರು. ಮಾತು ಮುಂದುವರಿಸುತ್ತಾ ನೀವು ತಿಳಿಸಿದಾಗಲೇ ಜಾಗೃತಿ ವಹಿಸಿದ್ದರೆ ಇಂತಹ ಕಷ್ಟ ಬರುತ್ತಿರಲಿಲ್ಲವೇನು, ಈಗ ಕಾಲ ಮಿಂಚಿ ಹೋಗಿದೆ, ಏನು ಮಾಡಲಾಗುವುದಿಲ್ಲವೆಂದು ಬಹಳ ದುಃಖದಿಂದ ಅವರ ಅನುಭವವನ್ನು ಕೇಳಿದರೆ ನಾವಾದರೂ ಅಂತಹ ತಪ್ಪುಗಳನ್ನು ಮಾಡಬಾರದೆಂದೆನಿಸಿತು. ಇಂತಹ ನೂರಾರು ನಿದರ್ಶನಗಳನ್ನು ಬರೆಯುತ್ತಾ ಹೋಗಬಹುದು. ಇನ್ನೊಂದು ಘಟನೆ ಬೇಲೂರಿನಲ್ಲಿ ಯೋಗ ಶಿಬಿರ ನಡೆಯುತ್ತಿದ್ದಾಗ 10ನೇ ತರಗತಿ ಓದುವ ವಿದ್ಯಾರ್ಥಿ ತನ್ನ ತಾಯಿಯ ಜೊತೆ ಯೋಗಕ್ಕೆ ಬಂದಿದ್ದರು. ಅವರು ನನ್ನ ಮಗನಿಗೆ ಉಸಿರಾಟದ ತೊಂದರೆ ಇದೆ ಇನ್ಹೇಲರ್ ಕೊಡುತ್ತಿದ್ದೇವೆ. ಅದನ್ನು ತೆಗೆದುಕೊಂಡರೆ ಮಾತ್ರ ಉಸಿರಾಡಬಹುದು ಇಲ್ಲ ಎಂದರೆ ಕಷ್ಟ ಇದರಿಂದ ಇವನ ತೂಕ ಕಮ್ಮಿಯಾಗುತ್ತಾ ಬರುತ್ತಿದೆ. ಈಗ ಕೇವಲ 32 ಕೆಜಿ ಇದ್ದಾನೆ ನೋಡಿ ಏನಾದರೂ ನಿಮ್ಮಿಂದ ಸಲಹೆ ಸಿಗಬಹುದೆಂದು ಕರೆದುಕೊಂಡು ಬಂದಿದ್ದೇನೆ ಎಂದರು. ಆ ತಾಯಿಯು ಸ್ವತಹ ಶಿಕ್ಷಕಿ ಅವರಿಗೆ ಅನೇಕ ಮಾಹಿತಿಗಳನ್ನು ಕೊಟ್ಟು ಈ ಮಾರ್ಗದಲ್ಲಿ ಅವನಿಗೆ ಅನುಕೂಲವಾಗುತ್ತದೆ. ಜೊತೆಗೆ ಸಮಯವೂ ಸಹ ತೆಗೆದುಕೊಳ್ಳಬಹುದು ಮುಂದುವರಿಸಿ ಬಿಡಬೇಡಿ ಎಂದು ಧೈರ್ಯ ಹೇಳಿದೆ ನಂಬಿಕೆಯಿಂದ ಅನುಸರಿಸಿದರು. ಈಗಾಗಲೇ ಮೂರು ವರ್ಷ ಕಳೆದಿದೆ ಆರೋಗ್ಯದಿಂದಿದ್ದಾನೆ ಅವರು ಹೇಳುತ್ತಿರುತ್ತಾರೆ. ನಮ್ಮ ಮಗನಿಗೆ ನೀವು ಮಾರ್ಗದರ್ಶನ ಮಾಡಿದ್ದು ಮರುಜನ್ಮ ಬಂದಂತಾಯಿತೆಂದು ತಾಯಿ ತಂದೆ ಹೇಳುತ್ತಿದ್ದರು. ಕಾರಣವಿಷ್ಟೇ ಒಬ್ಬನೇ ಮಗ. ಇನ್ನು ಕೆಲವರಿಗೆ ಕೆಟ್ಟ ಮೇಲೆ ಬುದ್ಧಿ ಬರುತ್ತದೆ ಅಂದರೆ ಔಷಧಿಗಳ ಸೈಡ್ ಎಫೆಕ್ಟ್ ಗೊತ್ತಾದ ಮೇಲೆ ನಮ್ಮ ಹತ್ತಿರ ಬಂದು ಕೇಳುತ್ತಾರೆ. ಅಷ್ಟರಾಗಲೇ ದೇಹದ ಅಂಗಾಂಗಗಳು ನಿಸರ್ಗದ ನಿಯಮವನ್ನು ಅನುಸರಿಸುವ ಶಕ್ತಿ ಕಳೆದುಕೊಂಡಿರುತ್ತವೆ. ಆವಾಗ ಏನೇ ಮಾಡಿದರು ಪ್ರಯೋಜನಕ್ಕೆ ಬರುವುದಿಲ್ಲವೆಂಬ ತಿಳುವಳಿಕೆ ಇಟ್ಟುಕೊಂಡು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವವನೇ ಜಾಣ.

ಔಷಧಿಗಳ ಅಡ್ಡ ಪರಿಣಾಮದ ಬಗ್ಗೆ ತಿಳುವಳಿಕೆ ಬರುತ್ತಿದೆ. ಅನೇಕ ನಡೆದ ಒಂದೆರಡು ಘಟನೆಗಳ ಉದಾಹರಣೆ ಹೇಳುವುದಾದರೆ 1986 ರಲ್ಲಿ ಜೆಜೆ ಆಸ್ಪತ್ರೆ ಮುಂಬೈ 14 ಜನ ರೋಗಿಗಳಿಗೆ ಶರೀರದ ಊತಕ್ಕೆ ಗ್ಲಿಸರೀನ್ ಕೊಡಲಾಯಿತು. ಅದು ಡೈಎಥಿಲೀನ್ ಗ್ಲೈಕಾಲ್ ಎಂಬ ರಾಸಾಯನದೊಂದಿಗೆ ಬೆರೆತಿತ್ತು. ಪರಿಣಾಮ ಈ 14 ಮಂದಿಯು ಸತ್ತರು.

ಇದಾದ ಐದು ವರ್ಷಗಳ ನಂತರ ಮುಂಬೈನ ಆಸ್ಪತ್ರೆ ಒಂದರಲ್ಲಿ ಆರು ಜನ ಅಸುನೀಗಿದರು. ಅವರಿಗೆ ಕೊಟ್ಟಿದ್ದ ಸೋಡಿಯಂ ಬೈಕಾರ್ಬೋನೇಟ್ ಖೋಟಾ ಆಗಿತ್ತು. ಆಸ್ಪಿರಿನ್, ಪ್ಯಾರಾಸೆಟಮಲ್, ಉರಿಊತಗಳನ್ನು ನಿವಾರಿಸಲು ಬಳಸುವ ಔಷಧಿಗಳು, ಹಿಸ್ಟಮಿನ್ ವಿರೋಧಿ ಔಷಧಗಳು, ಅಲರ್ಜಿಯ ನಿವಾರಣೆಗೆ ಉಪಯೋಗಿಸುವ, ಖಿನ್ನತೆಯ ನಿವಾರಣೆಯ, ನೆಮ್ಮದಿಕಾರಿ, ಅಧಿಕ ರಕ್ತದೊತ್ತಡ, ಕೊಲೆಸ್ಟ್ರಾಲ್ ಕಡಿಮೆ ಮಾಡುವ, ಆಮ್ಲರೋಧಕ ಔಷಧಗಳು, ಜೀವನ ಕ್ರಿಯೆಯನ್ನು ವ್ಯತ್ಯಾಸ ಗೊಳಿಸಿ ಯಾವ ಉದ್ದೇಶಕ್ಕಾಗಿ ಇವನು ಬಳಸುವೆವೋ ಅದಕ್ಕೆ ತದ್ವಿರುದ್ಧವಾದ ಪರಿಣಾಮ ಬೀರುತ್ತವೆ. ಸದಾ ಬಳಸಿದ ವಿರೇಚಕಗಳು ಕರುಳನ್ನು ಸೋಮಾರಿಯನ್ನಾಗಿಸಿ ಮಲಬದ್ಧತೆಯನ್ನು ಇನ್ನು ಹೆಚ್ಚಿಸುತ್ತವೆ. ಈ ಮಾತನ್ನು 19 95ರಲ್ಲಿ ಫ್ರೆಡ್ರಿಕ್ ನರೋಹನ್ ಎಂಬುವರು ಒಂದು ಪತ್ರಿಕೆಯಲ್ಲಿ ಹಂಚಿಕೊಂಡ ಔಷಧಿಗಳ ಅಡ್ಡ ಪರಿಣಾಮದ ಸಣ್ಣ ಮಾಹಿತಿ ಮೇಲೆ ತಿಳಿಸಿದ್ದೇನೆ ಅಷ್ಟೇ ಇಂತಹ ಅನೇಕ ವಾಸ್ತವಿಕ ಸತ್ಯ ಗೊತ್ತಿದ್ದರೂ ಏನು ಮಾಡಲಾಗದೆ ಸುಮ್ಮನಿರಬೇಕಾದ ಪರಿಸ್ಥಿತಿ ನಮ್ಮದಾಗಿದೆ ಕಾರಣ ಅವರಷ್ಟು ಹಣ ರಾಜಕೀಯ ಪ್ರಭಾವ ಇಲ್ಲದೆ ಇರುವುದರಿಂದ ನಾವೆಲ್ಲರೂ ಸುಳ್ಳನ್ನೇ ಸತ್ಯವೆಂದು ಒಪ್ಪಿಕೊಂಡು ಹೋಗಬೇಕಾದ ಪರಿಸ್ಥಿತಿಯಲ್ಲಿ ಇದ್ದೇವೆ. ಒಂದಿಷ್ಟು ಮೇಲಿನ ವಿಚಾರಗಳನ್ನು ಓದಿದ ಮೇಲಾದರೂ ಆರೋಗ್ಯ ವಿಚಾರದಲ್ಲಿ ಔಷಧಿಗಳು ಒಳ್ಳೆಯದ ಕೆಟ್ಟದ್ದ ನೀವೇ ನಿರ್ಧರಿಸಿ ಬದಲಾವಣೆ ಮಾಡಿಕೊಳ್ಳುವ ಜಾಣರಾದರೆ ಈ ಲೇಖನ ಬರೆದಿದ್ದಕ್ಕೂ ಸಾರ್ಥಕ. ಏನಂತೀರಿ.?

ಮೊದಲ ಪುಟದಿಂದ

# ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ ಸಂವಿಧಾನ

ನೆಪೋಲಿಯನ್ ಬೋನಾಪಾರ್ಟೆ ಅವರ ಕುರಿತು ಮತ್ತು ಪ್ರಜಾಪ್ರಭುತ್ವ ಬೆಳೆದು ಬಂದ ಹಂತದ ಕುರಿತಾಗಿ ವಿವರಿಸಿದರು.ನಿಜವಾದ ಪ್ರಜಾಪ್ರಭುತ್ವವನ್ನು ಚೋಳರ ಕಾಲದಲ್ಲಿ ನಾವು ನೋಡಬಹುದು. ಅಂಬೇಡ್ಕರ್ ಅವರು 18 ರಾಷ್ಟ್ರಗಳ ಸಂವಿಧಾನವನ್ನು ಅಧ್ಯಯನ ಮಾಡಿದವರಾಗಿದ್ದು 4 ಡಾಕ್ಟರೇಟ್ ಪದವಿ 64 ಪದವಿ ಪಡೆದಿದ್ದಾರೆ. ಅವರನ್ನು ನೆಹರು, ಗಾಂಧೀಜಿ ಅಂತಹ ರಾಷ್ಟ್ರೀಯ ನೇತಾರರು ಸಂವಿಧಾನವನ್ನು ರಚಿಸಲು ಆಯ್ಕೆ ಮಾಡಿದರು. ನಂತರ ಅಂಬೇಡ್ಕರ್ ಅವರು ಕರಡು ಸಮಿತಿ ಅಧ್ಯಕ್ಷರಾಗಿ ಸಂವಿಧಾನವನ್ನು ಸಿದ್ಧತೆ ಮಾಡಲು ಆರಂಭಿಸಿದವರಾಗಿದ್ದಾರೆ. ಅತ್ಯಂತ ಕಡಿಮೆ ದೋಷವಿರುವ ಪ್ರಜಾಪ್ರಭುತ್ವ ನಮ್ಮದಾಗಿದೆ ಎಂದು ತಿಳಿಸಿದರು.

ಜಿ.ಪಂ ಬಿ.ಆರ್. ಪೂರ್ಣಿಮಾ ಅವರು, ಸಂವಿಧಾನದ ಪೀಠಿಕೆ ಬೋಧಿಸಿದರು. ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸಮುದಾಯದ ಮುಖಂಡರಾದ ಹೆಚ್.ಕೆ. ಸಂದೇಶ್, ಈರಣ್ಣ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ದೂದಫೀರ್ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್ 17

1787: ಅಮೆರಿಕಾದ ಸಂವಿಧಾನವನ್ನು ಫಿಲಡೆಲ್ಫಿಯಾದಲ್ಲಿ ಸಹಿ ಮಾಡಲಾಯಿತು.
1934: ಸೋವಿಯತ್ ಒಕ್ಕೂಟವು ರಾಷ್ಟ್ರ ಸಂಘಕ್ಕೆ ಸದಸ್ಯತ್ವ ಪಡೆಯಿತು.
1948: ಹೈದರಾಬಾದ್ ಸಂಸ್ಥಾನವನ್ನು ಸೇನಾ ಕಾರ್ಯಾಚರಣೆ ಮೂಲಕ ಭಾರತಕ್ಕೆ ವಿಲೀನಗೊಳಿಸಲಾಯಿತು.
1974: ಬಾಂಗ್ಲಾದೇಶವು ವಿಶ್ವಸಂಸ್ಥೆಯ ಸದಸ್ಯರಾಗಿ ಸೇರಿತು.

### ಜನನ

1879: ಪೆರಿಗೋ ರಾಮಮೂರ್ತಿ (ಭಾರತೀಯ ಸ್ವಾತಂತ್ರ್ಯ ಹೋರಾಟಗಾರ)
1915: ಮ.ನ. ಮಣಿಕಾಂತ್ (ಕನ್ನಡ ಸಾಹಿಹಿತಿ)
1929: ಸ್ಟಿರ್ಲಿಂಗ್ ಮೋಸ್ (ಬ್ರಿಟಿಷ್ ಕಾರ್ ರೇಸರ್)
1930: ಎಡ್‌ವರ್ಡ್ ಆಲ್ಬಿ (ಅಮೇರಿಕನ್ ನಾಟಕಕಾರ)
1950: ಪ್ರಧಾನಿ ನರೇಂದ್ರ ಮೋದಿ

### ಮರಣ

1925: ಅಲೆಕ್ಸಾಂಡರ್ ಫ್ರೈಡ್‌ಮನ್ (ರಷ್ಯನ್ ಗಣಿತಜ್ಞ, ಬ್ರಹ್ಮಾಂಡ ವಿಜ್ಞಾನಿ)
1972: ವಿ. ಮಂಜಪ್ಪ (ಕರ್ನಾಟಕ ಮಾಜಿ ಮುಖ್ಯಮಂತ್ರಿ)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248